ಹೊನ್ನಾವರ ತಾಲ್ಲೂಕು ಹಾಗೂ ಭಟ್ಕಳ ತಾಲ್ಲೂಕುಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ

56(125) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಹೊನ್ನಾವರ ತಾ: ಹಾಗೂ ಭಟ್ಕಳ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಇದೆ?

2) ಹೊನ್ನಾವರ ಹಾಗೂ ಭಟ್ಕಳಗಳಲ್ಲಿ ಯಾವ ಯಾವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶವಿದೆ?

3) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕುಗಳಲ್ಲಿ ಈ ವರ್ಷ ಎಷ್ಟು ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :—

1) ಹೊನ್ನಾವರ ತಾಲ್ಲೂಕಿಗೆ ಹೆರಂಗಡಿಯಲ್ಲಿ ಉರ್ದು ಮಾಧ್ಯಮ ಪ್ರೌಢಶಾಲೆ ಭಟ್ಕಳ ತಾಲ್ಲೂಕಿನಲ್ಲಿ ಮುಂಡಳ್ಳಿ ಬೈಲೂರು ಹಾಗೂ ಕೋಣಾರ ಗ್ರಾಮಗಳಿಗೆ ಕನ್ನಡ ಮಾಧ್ಯಮ ಸರ್ಕಾರಿ ಪ್ರೌಢಶಾಲೆಗಳ ಅವಶ್ಯಕತೆ ಇರುತ್ತದೆ.

ಅ) ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕಿನ ಯಾವುದೇ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಬಂದಿರುವುದಿಲ್ಲ.

ಆ) 1998-99ನೇ ಸಾಲಿನಲ್ಲಿ ಹೊನ್ನಾವರ ತಾ: ಹುಡ್ಕೆ ಹಾಗೂ ಗೇರುಸೊಪ್ಪಗಳಲ್ಲಿ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿದೆ.

ಭಟ್ಕಳ ತಾಲ್ಲೂಕಿಗೆ ಈ ವರ್ಷದಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆ ಮಂಜೂರಾಗಿರುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಧ್ಯಮ ವ್ಯಂದ ಬದಲಾವಣೆ ಕುರಿತು ನಿಯಮ.

57(129) ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮರಾಠಿ ಮಾಧ್ಯಮದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಕನ್ನಡ ಮಾಧ್ಯಮಕ್ಕೆ ಬದಲಾವಣೆ ನೀಡಲು ರಾಜ್ಯ ಸರ್ಕಾರ ಅನುಸರಿಸುತ್ತಿರುವ ನಿಯಮಗಳೇನು?

ಅ) ಕಳೆದ 4 ವರ್ಷಗಳಲ್ಲಿ ಉತ್ತರ ಕನ್ನಡ ಜಲ್ಲೆಯ ಯಾವ ಯಾವ ಶಿಕ್ಷಕರಿಗೆ ಮರಾಠಿಯಿಂದ ಕನ್ನಡ ಮಾಧ್ಯಮಕ್ಕೆ ವ್ಯಂದ ಬದಲಾವಣೆ ಮಾಡಲಾಗಿದೆ?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಯಾವ ಯಾವ ಶಿಕ್ಷಕರ ಮಾಧ್ಯಮ ವ್ಯಂದ ಬದಲಾವಣೆ ಬಗ್ಗೆ ಪ್ರಸ್ತಾವನೆ ಏನಾದರೂ ಬಂದಿದೆಯೇ?

ಈ) ಬಾಕಿ ಉಳಿದಿರುವ ಪ್ರಸ್ತಾವನೆಯನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :—

ಅ) ಯಾವುದೇ ನಿರ್ದಿಷ್ಟ ನಿಯಮಗಳು ಇರುವುದಿಲ್ಲ.

ಆ) ಕಳೆದ 4 ವರ್ಷಗಳಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ 5 ಮರಾಠಿ ಶಿಕ್ಷಕರನ್ನು ಕನ್ನಡ ಶಿಕ್ಷಕರಾಗಿ ಪರಿವರ್ತಿಸಿದೆ. ಪಟ್ಟಿ ಲಗತ್ತಿಸಿದೆ.

ಇ) 11 ಜನ ಶಿಕ್ಷಕರ ಬಗ್ಗೆ ಪ್ರಸ್ತಾವನೆ ಬಂದಿದೆ. ಪಟ್ಟಿ ಲಗತ್ತಿಸಿದೆ.

ಈ) ಉಪನಿರ್ದೇಶಕರು ಪ್ರತ್ಯೇಕ ಪ್ರತ್ಯೇಕವಾಗಿ ವ್ಯಂದ ಬದಲಾವಣೆ ಪ್ರಸ್ತಾವನೆ ಸಲ್ಲಿಸುತ್ತಿದ್ದಾರೆ. ಈ ರೀತಿ ಪ್ರತ್ಯೇಕವಾಗಿ ಪ್ರಸ್ತಾವನೆ ಸಲ್ಲಿಸದೆ 7ನೇ ತರಗತಿ ಉತ್ತೀರ್ಣರಾಗಿರುವ ಮತ್ತು ಮರಾಠಿ ಶಿಕ್ಷಕರ ಅವಶ್ಯಕತೆ ಇಲ್ಲದಿರುವ ಎಲ್ಲಾ ಶಿಕ್ಷಕರ ಪಟ್ಟಿಯನ್ನು ಒಂದೇ ಬಾರಿಗೆ ಸಲ್ಲಿಸಲು ತಿಳಿಸಲಾಗಿದೆ. ಉಪನಿರ್ದೇಶಕರಿಂದ ಪ್ರಸ್ತಾವನೆ ಬಂದ ಕೂಡಲೇ ಪ್ರಸ್ತಾವನೆ ಪರಿಶೀಲಿಸಿ ಅವಶ್ಯ ಕ್ರಮಕ್ಕೆಗೊಳ್ಳಲಾಗುವುದು.

ಮರಾಠಿ ಮಾಧ್ಯಮದಿಂದ ಕನ್ನಡ ಶಿಕ್ಷಕರಾಗಿ ವ್ಯಂದ ಬದಲಾವಣೆ ಮಾಡಲು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಉತ್ತರ ಕನ್ನಡ ಜಿಲ್ಲೆ ಇವರು ಸಲ್ಲಿಸಿರುವ ಶಿಕ್ಷಕರ ಪಟ್ಟಿ.

1) ಶ್ರೀಮತಿ ಕಲ್ಪನಾ ನಾರಾಯಣ ನಾಯ್ಕ,
ಮರಾಠಿ ಶಿಕ್ಷಕಿ
ಹಿ.ಪ್ರಾ. ಮರಾಠಿ ಶಾಲೆ, ಜೊಯಿಡಾ.

2) ಶ್ರೀಮತಿ ಜ್ಯೋತಿ ಲಕ್ಷ್ಮಣ ನಾಯ್ಕ,
ಮರಾಠಿ ಶಿಕ್ಷಕಿ,
ಹಿ.ಪ್ರಾ. ಮರಾಠಿ ಶಾಲೆ, ಜೋಯಿಡಾ.

3) ಶ್ರೀಮತಿ ಸುಧಾ ಎಸ್. ನಾಯ್ಕ,
ಮರಾಠಿ ಶಿಕ್ಷಕಿ,
ಕಿ.ಪ್ರಾ. ಶಾಲೆ, ನಾಗಪ್ಪೂಂಡ, ಕಾರವಾರ ಜಿಲ್ಲೆ.

4) ಶ್ರೀಮತಿ ಶೋಭಾ ಕೆ. ಸಾವಂತ,
ಮರಾಠಿ ಶಿಕ್ಷಕಿ,
ಹಿ.ಪ್ರಾ. ಶಾಲೆ (ಮರಾಠಿ) ಹಣಕೋಣ, ಕಾರವಾರ.

5) ಶ್ರೀಮತಿ ಮಾನಾ ಕೆ. ಕುತ್ತಕರ
ಮರಾಠಿ ಶಿಕ್ಷಕಿ
ಕಿ.ಪ್ರಾ. ಶಾಲೆ, ಮರಾಠಿ ಶಾಲೆ,
ಪೋಟಗಾಳಿ, ಜೊಯಿಡಾ.

6) ಶ್ರೀಮತಿ ಇಂದಿರಾ ವಿಶ್ರಯ ದೇಸಾಯಿ
ಶಿಕ್ಷಕಿ, ಕಿ.ಪ್ರಾ. ಶಾಲೆ, (ಮರಾಠಿ), ಭಗತವಾಡ
ಕಾರವಾರ ಜಿಲ್ಲೆ.

7) ಶ್ರೀಮತಿ ಪೂರ್ಣಿಮಾ ಉ. ಭಟ್ಕಳ
ಹಿ.ಪ್ರಾ. ಶಾಲೆ, ಮರಾಠಿ ಶಾಲೆ,
ನಂದನಗುಡ್ಡ, ಕಾರವಾರ ತಾ:

8) ಶ್ರೀಮತಿ ಸರಸ್ವತಿ ಜ. ರಾಣೆ
ಸ.ಶಿ.ಕಿ.ಪ್ರಾ. ಶಾಲೆ,
ಗೋಟೆಗೋಳಿ, ಕಾರವಾರ ತಾ:

9) ಶ್ರೀಮತಿ ರಜಿಯಾ ರಾಯಾ ರಾಣೆ
ಸಹ ಶಿಕ್ಷಕರು, ಕಿ.ಪ್ರಾ. ಮರಾಠಿ ಶಾಲೆ,
ದೇವಳ, ಕಾರವಾರ ತಾ:

10) ಶ್ರೀಮತಿ ಶಶಿಕಲಾ ಎಸ್. ದೇಸಾಯಿ
ಮರಾಠಿ ಕಿ.ಪ್ರಾ. ಶಾಲೆ,
ಪಣಸೂಣ, ಜೊಯಿಡಾ.

11) ಶ್ರೀಮತಿ ಸರೋಜಿನಿ ಕುಬಲ
ಮರಾಠಿ ಶಿಕ್ಷಕಿ, ಹಿ.ಪ್ರಾ. ಶಾಲೆ,
ಹೋಟೇಗಾಳಿ ಕಾರವಾರ ತಾಲ್ಲೂಕು
ಉತ್ತರ ಕನ್ನಡ ಜಿಲ್ಲೆ.

ಮೈಸೂರು ನಗರದ ಕೆ.ಆರ್. ಆಸ್ಪತ್ರೆ ಚೆಲುವಾಂಬ ಆಸ್ಪತ್ರೆ ಪಿ.ಕೆ.ಟಿ.ಬಿ. ಆಸ್ಪತ್ರೆಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಬಗ್ಗೆ.

58(414) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡರು (ಚಾಮರಾಜ್) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.